ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ:ಸಿ(7)2ಪ್ರಾ.ಶಿ.ಅ.ದಾಖಲಾತಿ64/2013-14 ದಿನಾಂಕ:24.01.2015

# ಸುತ್ತೋಲೆ

ವಿಷಯ: ಖಾಸಗಿ ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2015-16 ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶ ಮಾಡುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು

ಉಲ್ಲೇಖ:1 ಕರ್ನಾಟಕ ಶಿಕ್ಷಣ ಕಾಯಿದೆ 1983ರ ಹಿನ್ನೆಲೆಯಲ್ಲಿ ರಚಿತವಾದ Karnataka educational institutions (Classification, Regulation and prescription of curricula,etc) Rules 1995 ಮತ್ತು ಸರ್ಕಾರದ ಅಧಿಸೂಚನೆ ಇಡಿ 71ವಿವಿಧ 98,ದಿನಾಂಕ.08.10.1999 ಮತ್ತು ಸರ್ಕಾರಿ ಆದೇಶ ಸಂಖ್ಯೆ:ಇಡಿ04 ವಿ.ವಿ.ಧ 2001 ದಿನಾಂಕ.05.07.2001

2. ಸರ್ಕಾರದ ಅಧಿಸೂಚನೆ ಇಡಿ 71ವಿವಿದ 98, ದಿನಾಂಕ.14.03.2000
3. ಶಿಕ್ಷಣ ಸಚಿವಾಲಯ ಸುತ್ತೋಲೆ ಇಡಿ 117 ಪಗಚ 2003, ದಿನಾಂಕ.28.04.2003
4. ಈ ಕಛೇರಿ ಸುತ್ತೋಲೆ ಸಿ7(7)ದಾಖಲಾತಿ ಸುತ್ತೋಲೆ/2004-05 ದಿನಾಂಕ.31.03.2005
5. ಈ ಕಛೇರಿ ಸುತ್ತೋಲೆ ಸಂಖ್ಯೆ ಸಿ8(1)ಶಾ.ಶಿ.ಅ.ಡೋ.ಹಾ21/11-12 ದಿನಾಂಕ: 08-12-2011.
6. ಈ ಕಛೇರಿ ಸುತ್ತೋಲೆ ಸಂಖ್ಯೆಸಿ7(2)ಪ್ರಾ.ಶಿ.ಅ.ಇತರೆ17/2011-12, ದಿನಾಂಕ: 02/05/2013
7. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಸಿ7(2) ಪ್ರಾಶಿಅದಾಖಲಾತಿ 64/2013-14 ದಿ: 07.01.2014

************

ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದಲ್ಲಿ ಪಾರದರ್ಶಕತೆಯಿಲ್ಲದಿರುವುದು ಮತ್ತು ನಿಗದಿತ ಶುಲ್ಕಕ್ಕಿಂತ ಹೆಚ್ಚು ಹಣ ಸಂಗ್ರಹಿಸುತ್ತಿರುವ ವಿಷಯ ವಿವಿಧ ಸಾಮಾಜಿಕ ವೇದಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ಈ ಸಂಬಂಧ ಸರ್ಕಾರ/ಇಲಾಖೆಯು ಖಚಿತ ನಿರ್ದೇಶನವನ್ನು ಈ ಹಿಂದಿನಿಂದಲೂ ನೀಡುತ್ತಾ ಬಂದಿದೆ. ಆದಾಗ್ಯೂ ಈ ವಿಷಯದ ಕುರಿತು ಸಾಕಷ್ಟು ದೂರುಗಳು ಪದೇ ಪದೇ ಕೇಳಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ನೀಡಿರುವ ಸುತ್ತೋಲೆಗಳನ್ನು ಭಾಗಷಃ ಮಾರ್ಪಡಿಸಿ ವಿದ್ಯಾರ್ಥಿಗಳ ಪ್ರವೇಶವನ್ನು ನಿಯಂತ್ರಿಸಲು ಕೆಳಕಾಣಿಸಿದ ಕಟ್ಟುನಿಟ್ಟಿನ ಸೂಚನೆಗಳನ್ನು ಹೊರಡಿಸಲಾಗಿದೆ.

**1.ಖಾಸಗಿ ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ನಡೆಯುವ ವಿದ್ಯಾರ್ಥಿಗಳ ಪ್ರವೇಶಾತಿಯ ಕುರಿತು**

- ವೇಳಾಪಟ್ಟಿ: ಪ್ರತಿ ಶಾಲೆಯು ತಮ್ಮ ಶಾಲೆಯಲ್ಲಿ ಲಭ್ಯವಿರುವ ಸೀಟುಗಳು ಮತ್ತು ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಶಾಲಾ ಪ್ರಕಟಣಾ ಫಲಕದಲ್ಲಿ ಶಾಲಾ ಮುಖ್ಯಸ್ಥರು ಕೆಳಕಾಣಿಸಿದಂತೆ ಪ್ರಕಟಿಸತಕ್ಕದ್ದು.

ಅ)

| ಕ್ರಮಸಂಖ್ಯೆ | ತರಗತಿ | ಲಭ್ಯವಿರುವ ಸೀಟುಗಳು | ಬೋಧನಾ ಮಾಧ್ಯಮ |
|---|---|---|---|
| 01 | 02 | 03 | 04 |

**ಆ)ಪ್ರವೇಶಾತಿಯ ವೇಳಾಪಟ್ಟಿ**

| ವಿವರ | ದಿನಾಂಕ |
|---|---|
| • ಲಭ್ಯ ಸೀಟುಗಳ ಮತ್ತು ಪ್ರವೇಶ ವೇಳಾಪಟ್ಟಿ ಪ್ರಕಟಣೆ | 02.03.2015 |
| • ಅರ್ಜಿ ವಿತರಣೆ | 21.03.2015 ರಿಂದ 31.03.2015 |
| • ಅರ್ಜಿ ಸ್ವೀಕಾರ(ಕಡೆಯ ದಿನಾಂಕ) | 31.03.2015 |
| • ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿ ಮತ್ತು ಕಾರಣ ಸಹಿತ ತಿರಸ್ಕೃತ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 04.04.2015 |
| • ಸಾರ್ವಜನಿಕರು ಮೇಲಿನ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕಡೆ ದಿನಾಂಕ | 07.04.2015 |
| • ಪ್ರಥಮ ಆಯ್ಕೆ ಪಟ್ಟಿ ಪ್ರಕಟಣೆ | 08.04.2015 |
| • ಪ್ರಥಮ ಆಯ್ಕೆ ಪಟ್ಟಿಯಲ್ಲಿರುವವರು ಪ್ರವೇಶ ಹೊಂದಲು ಕಡೆಯ ದಿನಾಂಕ | 15.04.2015 |
| • ದ್ವಿತೀಯ ಆಯ್ಕೆ ಪಟ್ಟಿ ಪ್ರಕಟಣೆ | 16.04.2015 |
| • ದ್ವಿತೀಯ ಆಯ್ಕೆ ಪಟ್ಟಿಯಲ್ಲಿರುವವರು ಪ್ರವೇಶ ಹೊಂದಲು ಕಡೆಯ ದಿನಾಂಕ | 22.04.2015 |